# ದಣಿಯ ನೋಡಿದೆನೋ ವೆಂಕಟನ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics mentioned without highlights are as per Ref. 3. Singer has followed these lyrics.
5. **Note:** The lyrics given separately in green highlights are as per Ref. 1. The wordings in Ref. 2 are similar to Ref. 1 except few wordings, which are given in yellow highlights.
6. **Note:** Also, please note that there are only 3 stanzas here, whereas in Ref. 3 there are 5 stanzas.

ರಾಗ ಕಾಪಿ ತಾಳ ಅಟ

ದಣಿಯ ನೋಡಿದೆನೋ ವೆಂಕಟನ, ಮನ-
ದಣಿಯ ನೋಡಿದ ಶಿಖಾಮಣಿ ತಿರುಮಲನ || ಪ ||

ಚರಣದಂದುಗೆ ಗೆಜ್ಜೆಯವನ, ಪೀತಾಂ-
ಬರ ಉಡಿಗೆ ಒಡ್ಯಾಣ ವಿಟ್ಟಿಹನ
ಮೆರೆಯುವ ಮಾಣಿಕ್ಯದವನ, ಚೆನ್ನ
ಸರ ಹಾರ ಪದಕ ಕೌಸ್ತುಭ ಧರಿಸಿದನ || 1 ||

ಕೊರಳೊಳು ವೈಜಯಂತಿ ಧರಿಸಿಹನ, ಕಿರು
ಬೆರಳ ಮುದ್ರಿಕೆ ಭುಜ ಕೀರ್ತಿಲೊಪ್ಪುವನ
ಅರಳು ಕಂಗಳ ನೋಟದವನ, ಸುಳಿ-
ಗುರುಳು ನೊಸಲು ಪಟ್ಟೆ ನಾಮ ಹಚ್ಚಿಹನ || 2 ||

ಶಂಖ ಚಕ್ರವ ಪಿಡಿದವನ, ಕೈ-
ಕಂಕಣ ತೋಳ್ಬಂದಿ ಬಾಪುರಿಯವನ
ಶಂಖನೂದುವ ಸರ್ವೋತ್ತಮನ, ಭೂ –
ವೈಕುಂಠವಿದೆಂದು ಹಸ್ತದಿ ತೋರಿಸುವನ || 3 ||

ಕೇಸಕ್ಕಿ ಅನ್ನ ಉಂಬುವನ, ಬಡ್ಡಿ
ಕಾಸು ಬಿಡದ ಹಾಗೆ ಕೂಡಿ ಹಾಕುವನ
ಘೋಷಾ ನಾದಕ್ಕೆ ಒಲಿದಿಹನ, ಮೈಯೊಳ್
ಸೂಸುವ ಗಂಧ ಕಸ್ತೂರಿ ಲೇಪಿತನ || 4 ||

ನೀಟಾದ ವಲ್ಲಿ ಹೊದ್ದಿಹನ, ಹೊರ
ಬೇಟೆಯಾಡಿ ಅಂದದಿಂದ ಬರುವನ
ನೋಟದಿ ಬಂದು ನಿಂತಿಹನ, ಈ
ಸೃಷ್ಟಿಗೊಡೆಯ ಪುರಂದರ ವಿಠ್ಠಲನ || 5 ||

**Note:** For these below mentioned lyrics, please see Ref. 1 and Ref. 2 above.

ರಾಗ ಸಾವೇರಿ ತಾಳ ಅಟ್ಟ

ಧಣಿಯ ನೋಡಿದೆನೋ ವೆಂಕಟನ, ಮನ-
ದಣಿಯ ನೋಡಿದೆ ಶಿಖಾಮಣಿಯ ನಿರ್ಮಲನ || ಪ ||

ಕೇಸಕ್ಕಿ ಅನ್ನ ಉಂಬುವನ (ತಿಂಬುವನ) ದುಡ್ಡು (ಬಡ್ಡಿ)
ಕಾಸು ಬಿಡದೆ ಹೊನ್ನು ಗಳಿಸಿಕೊಂಬುವನ (ಬಳಸಿಕೊಂಬುವನ)
ದೋಸೆ ಅನ್ನವ ಮಾರಿಸುವನ, ತನ್ನ
ದಾಸರ ಮೇಳದಿ ಕುಣಿದಾಡುತಿಹನ || 1 ||

ಗಂಟಿನೊಲ್ಲಿಯ ಹೊದ್ದಿಹನ (ಪೊದ್ದಿಹನ) ಹೊರ
ಹೊಂಟು ಹೋಗಿ ಬೇಟೆಯಾಡುತಲಿಹನ
ಘಂಟೆ ನಾದಕೆ ಒಲಿಯುವನ ಭೂ
ವೈಕುಂಠವಿದೆಂದು ಹಸ್ತವ ತೋರಿದವನ || 2 ||

ಬೆಟ್ಟದೊಳಗೆ ಇರುತಿಹನ ಮನ
ಮುಟ್ಟಿ ಭಜಿಪ ಭಕುತರಿಗೊಲಿದವನ
ಕೊಟ್ಟ ವರವ ತಪ್ಪದವನ ಈ
ಸೃಷ್ಟಿಗಧಿಕ ಪುರಂದರ ವಿಠ್ಠಲನ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಧಣಿಯ** – ಒಡೆಯನಾದವನನ್ನು.

**ಮನದಣಿಯ** – ಮನಸ್ಸು ತಣಿಸುವಂತೆ.

**ಶಿಖಾಮಣಿ** = ತಲೆಯಲ್ಲಿ ಧರಿಸುವ ರತ್ನ, ಶ್ರೇಷ್ಠ

**ನೀಟಾದ** = ನೇರವಾದ, ನೆಟ್ಟಗಿನ, ಸಿರಿವಂತ, ಉಚಿತ, ಚೆಲುವ

**ವಲ್ಲಿ** = ವಸ್ತ್ರ, ಶಲ್ಯ, ಉತ್ತರೀಯ, ಧೋತ್ರ, ಅಂಗವಸ್ತ್ರ

**ನೊಸಲು** = ಹಣೆ

**ಕೇಸಕ್ಕಿ** – ಕೆಂಪಕ್ಕಿ

**ಗಂಟಿನೊಲ್ಲಿಯ** – ಬಂಗಾರದ ಸಣ್ಣ ಗಂಟುಗಳನ್ನಳವಡಿಸಿ ಮಾಡಿದ ಮೇಲುಹೊದಿಕೆಯನ್ನು.

**ಭೂ ವೈಕುಂಠವಿದೆಂದು** – ತಿರುಪತಿ, ದೇವರ ಬಲಗೈ ವರದ ಮುದ್ರೆಯಲ್ಲಿರುವುದನ್ನು ಹೀಗೆ ಅರ್ಥ ಮಾಡಿದ್ದಾರೆ.

**ಹೊರ ಹೊಂಟು ಹೋಗಿ ..... ಬೇಟೆಯಾಡುತಲಿಹನ** = ಶ್ರೀ ವೆಂಕಟೇಶನು ಬೇಟೆಯಾಡಲು ಹೋದ ಕಥೆ, ಭವಿಷ್ಯೋತ್ತರ ಪುರಾಣಾಂತರ್ಗತ ವೆಂಕಟೇಶ ಮಹಾತ್ಮೆದಲ್ಲಿ ಬರುವುದು

**Classification:** Keerthane
**Ankita:** purandara vittala
**Location:** Tirupati
**Category:** Vishnu Stuti, Darshana Sambhrama
**Sub-Category:** Vishnu, srinivasa, gejje, abharana, shankha, chakra, kannu, kai, anna, rokka, gandha, Kasturi, betta, parvata, bhumi, vaikunta,
**Pravachana:** NA
**Explanation:** NA